**ದಿನಾಂಕಃ 16.07.2026 ರಂದು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು**

**ಮುಂದುವರೆದ ಪಾಟೀ ಸವಾಲು ವಾದಿ ಪರ ಶ್ರೀ.ಎಂ.ಎಸ್.ಜಿ ರವರಿಂದ**

3 ನೇ ಪ್ರತಿವಾದಿ ನನ್ನ ತಮ್ಮ. ನನಗೂ 3 ನೇ ಪ್ರತಿವಾದಿಗೂ ಹಗೇತನ ಇರಬಹುದು. ಬೇರೆ ಆಗುವಾಗ ಆಸ್ತಿ ವಿಚಾರದಲ್ಲಿ ನಮ್ಮಿಬ್ಬರ ನಡುವೆ ಚರ್ಚೆ ಆಗಿರುತ್ತದೆ. ದಾವಾ ಶೆಡ್ಯೂಲ್ 1 ರಲ್ಲಿ ದಕ್ಷಿಣಕ್ಕೆ 3 ನೇ ಪ್ರತಿವಾದಿ, ಪೂರ್ವಕ್ಕೆ ನಮ್ಮ ಮನೆ ಇದೆ. ದಾವಾ ಶೆಡ್ಯೂಲ 1 ರ ಪೂರ್ವಕ್ಕೆ ಬಾಣದ ರಾಮನಾಯಕರ ಜಾಗ, ಪಶ್ಚಿಮಕ್ಕೆ ಸರ್ವೇ ನಂಬರ ನನಗೆ ಗೊತ್ತಿಲ್ಲ ರಾಮಣ್ಣನವರು ಸದರಿ ಜಾಗ ಖರೀದಿ ಮಾಡಿರುತ್ತಾರೆ. ಉತ್ತರಕ್ಕೆ ಬಾಣದ ಮಂಜಪ್ಪ ನವರ ಜಾಗ ಅದರ ಸರ್ವೇ ನಂ.123. ದಕ್ಷಿಣಕ್ಕೆ ಕೆರೆ ಇರುತ್ತದೆ. ದಾವಾ ಶೆಡ್ಯೂಲ್ ಐಟಂ ನಂ.1 ಉತ್ತರಕ್ಕೆ ನನ್ನ ಹಿಸ್ಸೆಯ ಜಾಗ ಬಂದಿರುತ್ತದೆ. 3 ನೇ ಪ್ರತಿವಾದಿಗೆ ದಾವಾ ಶೆಡ್ಯೂಲ್ ಐಟಂ ನಂ.1 ರ ದಕ್ಷಿಣಕ್ಕೆ ಹಿಸ್ಸೆಯ ಜಾಗ ಬಂದಿರುತ್ತದೆ. ಸಾಕ್ಷಿ ಮುಂದುವರೆದು ಜುಬಾನಿ ಹಿಸ್ಸೆ ಪ್ರಕಾರ ಶೆಡ್ಯೂಲ್ ಐಟಂ ನಂ.1 ಸಂಪೂರ್ಣ 3 ನೇ ಪ್ರತಿವಾದಿಗೆ ಎಂದು ತೋರಿಸಲಾಗಿದೆ. ಜುಬಾನಿ ಹಿಸ್ಸೆ ಪ್ರಕಾರ ನನಗೆ ದಾವಾ ಶೆಡ್ಯೂಲ್ ಐಟಂ ನಂ.1 ರಲ್ಲಿ ಯಾವುದೇ ಹಿಸ್ಸೆ ಇಲ್ಲ.

ನಾವು ಹಿಸ್ಸೆ ಮಾಡಿಕೊಂಡೆವು ಎಂದು ಹೇಳಿದ ದಿನಾಂಕದಂದು ನಮ್ಮ ಕುಟುಂಬಕ್ಕೆ ಒಟ್ಟು ಸರ್ವೇ ನಂ.124 ರಲ್ಲಿ 3 ಎಕರೆ 36 ಗುಂಟೆ, ಸರ್ವೇ ನಂ.29/2 ರಲ್ಲಿ 9 ಎಕರೆ, ಸರ್ವೇ ನಂ.94 ರಲ್ಲಿ 20 ಗುಂಟೆ ಜಮೀನು ಇತ್ತು. ಸಾಕ್ಷಿ ಮುಂದುವರೆದು ಸರ್ವೇ ನಂ.29/2 ರಲ್ಲಿ ರೆಕಾರ್ಡ ನಲ್ಲಿ 9 ಎಕರೆ ಇದ್ದು ನಿಜ ವಿಸ್ತೀರ್ಣ ಸರ್ವೇ ನಂತರ 3 ಎಕರೆ 36 ಗುಂಟೆ ಇರುತ್ತದೆ. ಹಿಸ್ಸೆ ಆಗುವ ಸಮಯದಲ್ಲಿ ಸರ್ವೇ ನಂ.29/2 ರಲ್ಲಿ 9 ಎಕರೆ ಜಮೀನು ಇದೆ ಎಂದು ತಿಳಿದುಕೊಂಡಿದ್ದೆವು. ಸರ್ವೇ ನಂ.29/2 ರಲ್ಲಿ 9 ಎಕರೆ ಜಮೀನು ಇದೆ ಎಂದರೆ ಸರಿಯಲ್ಲ, ಸಾಕ್ಷಿ ಮುಂದುವರೆದು ನ್ಯಾಯಾಲಯದ ಕಮೀಷನರ್ ಜಮೀನು ಅಳತೆ ಮಾಡಿದಾಗ ಕೇವಲ 3 ಎಕರೆ 36 ಗುಂಟೆ ಇದೆ ಎಂದು ತಿಳಿದು ಬಂದಿರುತ್ತದೆ. ಸರ್ವೇ ನಂ.29/2 ರಲ್ಲಿ 9 ಎಕರೆ ಇಲ್ಲ ಕೇವಲ 3 ಎಕರೆ 36 ಗುಂಟೆ ಇದೆ ಎಂದು ಸರ್ವೇಯವರಿಗೆ ಅರ್ಜಿಯನ್ನು ಕೂಡಲು ಪ್ರಯತ್ನಿಸಿದೆ ಆಗ ಅವರು ಹಕ್ಕು ಪತ್ರ ತರಲು ಹೇಳಿರುತ್ತಾರೆ ಸಾಕ್ಷಿ ಮುಂದುವರೆದ ಹಕ್ಕು ಪತ್ರ ಇಂದಿಗೂ ನಮಗೆ ಸಿಕ್ಕಿರುವುದಿಲ್ಲ ಎಂದು ಉತ್ತರಿಸುತ್ತಾರೆ. ಈ ರೀತಿ ಹಕ್ಕುಪತ್ರ ತರಲು ಹೇಳಿದ್ದಾರೆ ಎಂದು ತೋರಿಸಲು ಯಾವುದೇ ದಾಖಲಾತಿ ನನ್ನ ಬಳಿ ಇರುವುದಿಲ್ಲ. ಸರ್ವೇ ನಂ.124 ರಲ್ಲಿ ಒಂದು ಮೂಲ ವಾಸದ ಮನೆ ಇದೆ. 3 ನೇ ಪ್ರತಿವಾದಿ

ಮತ್ತು ಆತನ ಕುಟುಂಬ ಅದರಲ್ಲಿ ವಾಸವಾಗಿದ್ದಾರೆ. ಜುಬಾನಿ ಹಿಸ್ಸ ಪತ್ರದ ಪ್ರಕಾರ ಸದರಿ ಮೂಲ ವಾಸದ ಮನೆಯನ್ನು ಬಿಟ್ಟು ಹೋಗಬೇಕು ಅದರ ಬಾಬ್ತು ಸ್ವಲ್ಪ ಹಣವನ್ನು ಪಡೆದುಕೊಳ್ಳುವುದು ಎಂದು ತೀರ್ಮಾನ ಆಗಿರುತ್ತದೆ. 4 ವರ್ಷ ಆ ಮನೆಯಲ್ಲಿ ಇರಬೇಕು ಎಂದು ಆಗಿತ್ತು ಅದರಂತೆ 4 ವರ್ಷ ಮನೆಯಲ್ಲೇ ಇದ್ದೆ. ಸ್ವಲ್ಪ ಹಣವನ್ನು ಈ ಬಾಬ್ತು 3 ನೇ ಪ್ರತಿವಾದಿ ನೀಡಿರುತ್ತಾರೆ. ಮನೆಯ ಪಕ್ಕಾಸಿ ಹಾಗೂ ಸ್ವಲ್ಪ ನಾಟವನ್ನು ನನಗೆ ನೀಡಬೇಕು ಎಂದು ಮಾತಾಡಿತ್ತು ಆದರ 3 ನೇ ಪ್ರತಿವಾದಿ ನನಗೆ ನೀಡಿರುವುದಿಲ್ಲ. ಇದರ ವಸೂಲಾತಿಗೆ ನಾನು ಯಾವುದೇ ಕ್ರಮ ಕೈಗೊಂಡಿರುವುದಿಲ್ಲ. ಯಾವುದೇ ಗಳಿಕೆ ಹಣ ಇರಲಿಲ್ಲ. ಸ್ವಲ್ಪ ಸಾಲ ಇತ್ತು. ಅಲ್ಲಿಯವರೆಗೂ ನಾನೇ ಆ ಮನೆಗೆ ಯಜಮಾನ ಆಗಿದ್ದೆ. 2000 ಇಸವಿಯಲ್ಲಿ 10 ಸಾವಿರ ಸಾಲ ಇತ್ತು. ಅದನ್ನು 3 ನೇ ಪ್ರತಿವಾದಿ ನಾನೇ ತಿರಿಸುತ್ತೇನೆ ಮನೆ ಬಿಟ್ಟು ಹೂೀಗಿ ಎಂದು ಹೇಳಿದ, ಅದರಂತೆ ನಾವು ಮನೆ ಬಿಟ್ಟು ಬಂದಿರುತ್ತೇವೆ. ಮನೆ ಬಾಬ್ತು ನನಗೆ 10 ಸಾವಿರ ಕೊಡಲು ಮಾತಾಗಿತ್ತು. ಸದರಿ 10 ಸಾವಿರ ನನಗೆ 3 ನೇ ಪ್ರತಿವಾದಿ ನೀಡಿರುತ್ತಾರೆ. ಸಂಪೂರ್ಣ ಸಾಲದ ಹೊರೆ 3 ನೇ ಪ್ರತಿವಾದಿಗೆ ಬಿದ್ದಿರುತ್ತದೆ. ಹಿಸ್ಸೆ ಮಾಡಿಕೊಂಡಾಗ ಆ ವರ್ಷದ ಅಡಿಕೆ ಫಸಲು ಮನೆಯಲ್ಲಿ ಇತ್ತು. 20 ಸಾವಿರ ಬೆಲೆ ಬಾಳುವ ಫಸಲು ಬರುತ್ತಿತ್ತು. ಅದರಲ್ಲಿ 5 ಸಾವಿರ ಹಣವನ್ನು ನನ್ನ ತಂದೆಗೆ ನೀಡಿದ್ದೆವು ಉಳಿದ ಹಣವನ್ನು ನಾವಿಬ್ಬರು ಹಂಚಿಕೊಂಡೆವು. ದಾವಾ ಶೆಡ್ಯೂಲ ಐಟಂ ನಂ.1 ಸಾಗರದ ಪ್ರಗತಿ ನಗರದ ಉತ್ತರಕ್ಕೆ ಇದೆ ಎಂದರೆ ಸರಿ. ಅದೇ ದಿನ ಚರಾಸ್ಥಿಗಳನ್ನು ಭಾಗ ಮಾಡಿಕೊಂಡಿರುತ್ತೇವೆ. ಜುಬಾನಿ ಪತ್ರವನ್ನು ನೊಂದಣಿ ಮಾಡಿಸಬಹುದು ಇತ್ತು ಎಂದರೆ ಸಾಕ್ಷಿ ಇಬ್ಬರು ಬಂದರೆ ಮಾತ್ರ ನೊಂದಣಿ ಮಾಡಿಸಬಹುದು ಎಂದು ಹೇಳಿರುತ್ತಾರೆ. ನನಗೆ ಇಬ್ಬರು ಅಕ್ಕತಂಗಿಯರು. ಅವರಿಗೆ ಯಾವುದೇ ಹಿಸ್ಸೆಯನ್ನು ನೀಡಿರುವುದಿಲ್ಲ. ವಾದಿಗೆ ಯಾವುದೇ ಹಿಸ್ಸೆ ಹೋಗಬಾರದು ಎಂದು ನಿಡಿ–9 ಅನ್ನು ಸೃಷ್ಟಿಸಿಕೊಳ್ಳಲಾಗಿದೆ ಎಂದರೆ ಸರಿಯಲ್ಲ. ನಿಡಿ–9 ರಲ್ಲಿರುವ ಹೆಬ್ಬಟ್ಟಿನ ಗುರುತು ನನ್ನ ತಂದೆದಲ್ಲ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಪ್ರಮುಖ ಸಾಕ್ಷಿಗಳು ಸಾಹಿ ಹಾಕಿರುತ್ತಾರೆ ಎಂದು ಉತ್ತರಿಸುತ್ತಾರೆ. ಪ್ರಭಾಕರ ನನ್ನ ಮಗ. ವಾದಿಯ ತಾಯಿ ಜೀವನಾಂಶದ ಪ್ರಕರಣವನ್ನು ದಾಖಲು ಮಾಡಿದಾಗ ನಾನು ಸಾಕ್ಷಿ ಹೇಳಿದ್ದೆ ಎಂದರೆ ಸರಿ. ವಾದಿ ತನ್ನ ಅಪ್ಪನ ಮೇಲೆ ದಾವಾ ಹಿಸ್ಸೆ ಬಾಬ್ತು ಪ್ರಕರಣ ದಾಖಲು ಮಾಡಿದಾಗ ನನ್ನನ್ನು ಹಾಗೂ ನನ್ನ ಮಕ್ಕಳನ್ನು ಪಕ್ಷಗಾರರನ್ನಾಗಿ ಮಾಡಿದ್ದಾರೆ ಎಂದರೆ ಸರಿ. ನಾನು ಅಣ್ಣ ತಮ್ಮ ಹಿಸ್ಸೆ ಆಗಿದ್ದು ಸುಳ್ಳು ಎಂದರೆ ಸರಿಯಲ್ಲ.

**3 ನೇ ಪ್ರತಿವಾದಿ ಪರ ವಕೀಲರು ಸಮಯ ಕೋರಿದ್ದು, ಸಮಯ ನೀಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ರೀತ್ಯಾ ಗಣಕೀಕರಿಸಲಾಯ್ತು)

ಓದಿ ಹೇಳಿ ಕೇಳಿ ಸರಿ ಇದೆ

1 ನೇ ಹೆಚ್ಚುವರಿ ಹಿರಿಯ ವ್ಯವಹಾರ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ, ಸಾಗರ